ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

೪. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅಧ್ಯಕ್ಷರು: ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡುವ ವಿಷಯಗಳ ಬಗ್ಗೆ ಹೇಳುವುದೇನೆಂದರೆ, ಯಾವುದಕ್ಕೆ ಉತ್ತರ ಬಂದಿದೆಯೋ ಅವುಗಳನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ಇವತ್ತು ಮೂರು ವಿಷಯಗಳಿಗೆ ಉತ್ತರ ಬಂದಿದೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಸಭಾಧ್ಯಕ್ಷರೇ, ಉತ್ತರ ಬರುವ ವೇಳೆಗೆ ಸಮಸ್ಯೆಯೇ ಮುಗಿದು ಹೋಗುತ್ತದೆ. ತಮ್ಮ ಅವಗಾಹನೆಗೆ ಒಂದು ವಿಚಾರ ತರುತ್ತೇನೆ. ತುರ್ತಾಗಿ ಉದ್ಭವಿಸಿರತಕ್ಕ ವಿಷಯಗಳನ್ನು ಶೂನ್ಯವೇಳೆಯಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ. ಬೇಕಾದರೆ ಉತ್ತರವನ್ನು ಅವರು ನಾಳೆ ಹೇಳಲಿ, ನಾವು ಪ್ರಸ್ತಾಪ ಮಾಡುವುದಕ್ಕೆ ದಯವಿಟ್ಟು ತಾವು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು: ಬರೀ ಪ್ರಸ್ತಾಪ ಸಾಕು ಎಂದು ಹೇಳಿದರೆ, ಅವಕಾಶ ಕೊಡೋಣ ಬಿಡಿ. ಅದಕ್ಕೆ ನಮ್ಮದೇನೂ ಅಭ್ಯಂತರ ಇಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ: ಪ್ರಸ್ತಾಪ ಮಾಡುವುದೇ ನಿಯಮದ ಪ್ರಕಾರ ಇರುವುದು. ನಿಯಮದಲ್ಲಿ ಉತ್ತರ ಹೇಳಬೇಕೆಂದು ಎಲ್ಲಿಯೂ ಇಲ್ಲ. ಆದರೂ, ನಾವು ಸಾಧ್ಯವಾದಷ್ಟು ತಯಾರಿಯಾಗಿ ಬಂದು, ಉತ್ತರ ಹೇಳುತ್ತೇವೆ.

ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ಗರ್ಭಿಣಿ ಸ್ತ್ರೀಯರಿಗೆ ವೈದ್ಯಕೀಯ ಸೌಲಭ್ಯ

+ ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಹೆಸರಾಂತ ಆಸ್ಪತ್ರೆ ಇದೆ, ಅದು ಬೌರಿಂಗ್ ಆಸ್ಪತ್ರೆ. ಬಡ ರೋಗಿಗಳಿಗೆ, ಸುತ್ತಮುತ್ತಲಿಂದ ಬರತಕ್ಕ ಹಳ್ಳಿಗಳ ರೋಗಿಗಳಿಗೆ ಚಿಕಿತ್ಸೆಕೊಡುವ ಆಸ್ಪತ್ರೆ ಎಂದರೆ, ಬೌರಿಂಗ್ ಆಸ್ಪತ್ರೆ. ಇವತ್ತು ಆ ಬೌರಿಂಗ್ ಆಸ್ಪತ್ರೆಯಲ್ಲಿ ಒಂದು ಆಘಾತಕರ ವಿಚಾರ ನನಗೆ ಗೊತ್ತಾಗಿದೆ. ಗರ್ಭಿಣಿ ಸ್ತ್ರೀಯರು ಬಂದರೆ, ಹಾಸಿಗೆ ಇಲ್ಲದೇ ಬೇರೆ ಬೇರೆ ಆಸ್ಪತ್ರೆಗಳಿಗೆ ಕಳುಹಿಸುವ ಒಂದು ವ್ಯವಸ್ಥಿತ ವ್ಯವಸ್ಥೆ ಇವತ್ತು ಆ ಆಸ್ಪತ್ರೆಯಲ್ಲಿ ಬಂದಿದೆ. ವಿಶೇಷವಾಗಿ ಮಧ್ಯರಾತ್ರಿ ಬಡ ಗರ್ಭಿಣಿಯರು ಬಂದಾಗ, ಅಲ್ಲಿಂದ ಯಾವ ಆಸ್ಪತ್ರೆಗೆ ಹೋಗುವುದಕ್ಕೆ ಸಾಧ್ಯ? ವಾಣಿವಿಲಾಸ, ಜಯನಗರ ಆಸ್ಪತ್ರೆಗಳಿಗೆ ಹೋಗಿ ಎಂದರೆ, ದಾರಿಯಲ್ಲಿ ಏನಾಗಬಹುದು? ಈ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಾ, ಹೋಟೆಲಿನಲ್ಲಿ ಒನ್-ಬೈ-ಟು ಕಾಫಿ ಕೊಡಿ ಎಂದು

ಕೇಳುವುದನ್ನು ಕೇಳಿದ್ದೇವೆ. ಆಸ್ಪತ್ರೆಗಳಲ್ಲಿ ಹಾಸಿಗೆಯಲ್ಲಿ ಕೂಡ ಒನ್-ಬೈ-ಟು ವ್ಯವಸ್ಥೆ ಆದೂ ಬೌರಿಂಗ್ ಆಸ್ಪತ್ರೆಯಲ್ಲಿ ಬಂದಿರುವುದು ಒಂದು ಆಘಾತಕಾರಿ ವಿಚಾರ. ಈ ವಿಷಯವನ್ನು ನಾವು ಕೇಳಿದರೆ ಗಾಬರಿಯಾಗುತ್ತದೆ. ಅಲ್ಲಿ ಹಾಸಿಗೆಗಳನ್ನು ಬೈ-ಟು ಮಾಡಿ, ಆ ಗರ್ಭಿಣಿಯರನ್ನು ಮಲಗಿಸಿರುವುದನ್ನೂ ಕೂಡ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಪ್ರತಿ ದಿನ ಮೂನ್ನೂರರಿಂದ ನಾಲ್ಕುನೂರು ಜನ ಹೆಂಗಸರು ಈ ಆಸ್ಪತ್ರೆಗೆ ಬರುತ್ತಿದ್ದಾರೆ. ಇದರಲ್ಲಿ ಅರವತ್ತರಿಂದ ಎಪ್ಪತ್ತು ಜನ ಹೆಂಗಸರು ಗರ್ಭಿಣಿಯರು; ಹಳ್ಳಿಗಳಿಂದ, ಬೆಂಗಳೂರಿನ ಸುತ್ತಮುತ್ತ ಪ್ರದೇಶಗಳಿಂದ ಬರುತ್ತಾರೆ. ಆದ್ದರಿಂದ ಈ ಆಸ್ಪತ್ರೆಗೆ ಅಗತ್ಯವಾಗಿ ಕಾಯಕಲ್ಪ ನೀಡುವ ಅವಶ್ಯಕತೆ ಇದೆ. ಆಸ್ಪತ್ರೆಯಲ್ಲಿ ಬರುವ ಜನರ ಸಂಖ್ಯೆ ಜಾಸ್ತಿ ಆದರೆ ಇರುವ ಹಾಸಿಗೆಗಳ ಸಂಖ್ಯೆ ಕಡಿಮೆ ಆದ್ದರಿಂದ ನಾವು ಏನೂ ಮಾಡಲು ಆಗುತ್ತಿಲ್ಲವೆಂದು ಆಸ್ಪತ್ರೆಯ ಸೂಪರಿಂಟೆಂಡೆಂಟ್‌ರವರು ಹೇಳುತ್ತಾರೆ. ಅವರ ಪ್ರಕಾರವೇ ನಮ್ಮ ಆಸ್ಪತ್ರೆ ಓವರ್‌ಕ್ರೌಡೆಡ್ ಎಂದು ಹೇಳುತ್ತಾರೆ. ಇದೇನು ಓವರ್-ಕ್ರೌಡೆಡ್ ಆಗಲು ಬಿ.ಎಂ.ಟಿ.ಸಿ ಬಸ್ಸೇ? ಇಡೀ ರಾಜ್ಯದಲ್ಲಿ ಹೆಸರಾಂತವಾದ ಈ ಆಸ್ಪತ್ರೆಗೆ ಬಂದು ಹೋಗುವ ಬಡ ರೋಗಿಗಳಿಗೆ ಇರುವ ಸಮಸ್ಯೆಯ ಬಗ್ಗೆ ಸರ್ಕಾರ ಅಗತ್ಯವಾದ ಕ್ರಮ ತೆಗೆದುಕೊಳ್ಳಬೇಕು. ಮತ್ತೆ ಮತ್ತೆ ಈ ಒನ್ ಬೈ ಟೂ ಸ್ಥಿತಿ ಅಥವಾ ಓವರ್-ಕ್ರೌಡೆಡ್ ಸ್ಥಿತಿ ಆಗಬಾರದು. ಆ ಆಸ್ಪತ್ರೆಗೆ ಹಿಂದಿನಿಂದಲೂ ಬಹಳ ಒಳ್ಳೆಯ ಹೆಸರು ಇದೆ. ಅಲ್ಲಿ ಹಾಸಿಗೆಗಳ ಸಂಖ್ಯೆಯನ್ನು ಜಾಸ್ತಿ ಮಾಡಿ ಅಲ್ಲಿರುವ ವಾರ್ಡುಗಳನ್ನು ವಿಸ್ತರಿಸಿ ಬಡವರಿಗೆ ಸೂಕ್ತ ನೆರವು ವೈದ್ಯಕೀಯ ನೀಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

+ ಶ್ರೀಮತಿ ನಫೀಸಾಫಜಲ್ (ವೈದ್ಯಾಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಸಿದ್ಧವಾದ ಆಸ್ಪತ್ರೆಯೆಂದು ಅವರೇ ಹೇಳಿದ್ದಾರೆ. ಬೌರಿಂಗ್ ಆಸ್ಪತ್ರೆಗೆ ಹೆಚ್ಚು ಜನ ರೋಗಿಗಳು ಬರುತ್ತಿರುವುದರಿಂದ ನಮ್ಮ ಆಸ್ಪತ್ರೆಯ ಆರೋಗ್ಯ ಎಷ್ಟು ಚೆನ್ನಾಗಿದೆಯೆಂದು ಎಲ್ಲರಿಗೂ ಗೊತ್ತಾಗಬೇಕು. ಪ್ರಜಾವಾಣಿ ಪತ್ರಿಕೆಯಲ್ಲಿ ಬೌರಿಂಗ್ ಆಸ್ಪತ್ರೆಯಲ್ಲಿ ಔಷಧಿಗಳನ್ನು ಉಚಿತವಾಗಿ ಕೊಡುತ್ತಾರೆ, ರೋಗಿಗಳನ್ನು ಚೆನ್ನಾಗಿ ನೋಡುತ್ತಾರೆ, ಬೇರೆ ಎಲ್ಲಾ ರೀತಿಯಾದ ಸೌಲಭ್ಯಗಳು ಇದೆಯೆಂದು ವರದಿ ಬಂದಿದೆ. ಮಾನ್ಯ ಸದಸ್ಯರು ಓವರ್-ಕ್ರೌಡೆಡ್ ಬಗ್ಗೆ ಹೇಳಿದ್ದಾರೆ, ಅದು ನಿಜ. ಮೂವತ್ತು ನಲವತ್ತು ವರ್ಷಗಳಿಂದ ಅಲ್ಲಿರುವ ಕಟ್ಟಡದ ವಿಸ್ತೀರ್ಣದ ಕೆಲಸವನ್ನು ಮಾಡಿಲ್ಲ. ಆದರೂ ರೋಗಿಗಳು ಬರುವ ಸಂಖ್ಯೆ ಜಾಸ್ತಿಯಾಗಿದೆ. ಆದಕ್ಕಾಗಿ ಕರ್ನಾಟಕ ಹೆಲ್ತ್ ಸರ್ವೀಸ್ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ನಿಂದ ಘೋಷಾಯ ಆಸ್ಪತ್ರೆಯ ಅಭಿವೃದ್ಧಿ ಮಾಡುತ್ತಿದ್ದೇವೆ. ಸಾಲವನ್ನು ಪಡೆದು ಆ ಕೆಲಸ ಮಾಡುತ್ತಿದ್ದೇವೆ. ಈ ಆಸ್ಪತ್ರೆಯು ಬೌರಿಂಗ್ ಆಸ್ಪತ್ರೆಗೆ ಹತ್ತಿರದಲ್ಲಿದೆ. Excess pregnanat women from the Bowring and Lady Curzon Hospital can

go to Ghousia Hospital because work is going on there. ನಾನು ಅಲ್ಲಿಗೆ ಹೋಗಿ (ಇನ್ಸ್‌ಪೆಕ್ಷನ್) ಮಾಡಿ ಬಂದಿದ್ದೇನೆ. ಬೌರಿಂಗ್ ಆಸ್ಪತ್ರೆಯ ಆವರಣದಲ್ಲಿ ಹೊಸ ಕಟ್ಟಡವನ್ನು ಕಟ್ಟಲು ಜಾಗ ಇಲ್ಲ. So inflow of patients which is in excess will have to go to Ghousia Hospital after the infrastructrue is ready. ಮಾನ್ಯ ಸದಸ್ಯರು ಇನ್ನೊಂದು ವಿಚಾರವನ್ನು ಹೇಳಿದ್ದಾರೆ, ಮಧ್ಯರಾತ್ರಿಯ ಸಮಯದಲ್ಲಿ ಗರ್ಭಿಣಿ ಸ್ತ್ರೀಯರು ಹೋದರೆ ಇಲ್ಲಿ ಹಾಸಿಗೆ ಇಲ್ಲ ಬೇರೆ ಆಸ್ಪತ್ರೆಗೆ ಹೋಗಿ ಎಂದು ಆಸ್ಪತ್ರೆಯವರು ಹೇಳುತ್ತಾರೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಈ ವಿಚಾರ ಸರಿಯಲ್ಲ. It is a fact that the total number of bed strength in the Bowring hospital is 686; out of this, 120 beds are reserved for Obstetrics and Gynaecology. Obstetrics means pregnant women and problems pertaining to pregnancy. Gynaecology deals with fibroids and overbleeding and things like that. There are three units functioning in the Bowring hospital on rotation. Mondays and Thursdays - one unit head; Tuesdays and Fridays - another unit head and on Saturdays and Wednesdays the other unit head works. ಆಕಸ್ಮಾತ್ ಒಬ್ಬ ಯೂನಿಟ್ ಹೆಡ್ ಪರಿಶೀಲನೆ ಮಾಡಿದ್ದರೆ ಬೇರೆ ಯೂನಿಟ್ ಹೆಡ್‌ನ್ನು ನೋಡಲು ಹೋಗುವುದಿಲ್ಲ. So it by chance a woman goes to the unit on a wrong day, only then she is sent back because the concerned unit head, who is handling the case, is not there on that day, because everytime a new unit head cannot handle the case. ಆದ್ದರಿಂದ ಅವರನ್ನು ವಾಪಸ್ ಕಳಿಸುತ್ತಾರೆ.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಗರ್ಭಿಣಿ ಮಹಿಳೆಯರು ಕಾಯಲು ಆಗುತ್ತದೆಯೇ? ಅವರು ಸತ್ಯಕ್ಕೆ ದೂರವಾದ ಮಾಹಿತಿ ಕೊಡುತ್ತಿದ್ದಾರೆ. ಗರ್ಭಿಣಿ ಮಹಿಳೆಯರು ನಾಳೆ, ನಾಡಿದ್ದು ಎಂದು ಕಾಯಲು ಆಗುತ್ತದೆಯೇ?

ಶ್ರೀಮತಿ ನಫೀಸಾ ಫಜಲ್: ನಾನು ಎಲ್ಲದರ ಬಗ್ಗೆ ಸರಿಯಾದ ಉತ್ತರವನ್ನೇ ಕೊಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ನಾನು ಮಾನ್ಯ ಸಚಿವರಿಗೆ ಒಂದು ಸಲಹೆಯನ್ನು ನೀಡುತ್ತೇನೆ. ಅವರು ಹೇಳಿರುವುದು ಮತ್ತು ಪ್ರಜಾವಾಣಿ ಪತ್ರಿಕೆಯಲ್ಲಿ ವರದಿ ಬಂದಿರುವುದು ವಾಸ್ತವಾಂಶ. ಕಳೆದ ಹದಿನಾರು ವರ್ಷಗಳಿಂದ ಬೌರಿಂಗ್

ಆಸ್ಪತ್ರೆಯಲ್ಲಿ ಹಾಸಿಗೆಯ ಸಂಖ್ಯೆಯನ್ನು ಜಾಸ್ತಿ ಮಾಡಲು ಮಾಡಿರುವ ಪ್ರಯತ್ನ ಇನ್ನೂ ಸಫಲವಾಗಿಲ್ಲ. 686 ಹಾಸಿಗೆಗಳು ಅಲ್ಲಿದೆ. ಅದರಲ್ಲಿ 120 ಹಾಸಿಗೆಗಳನ್ನು ಗೈನಕಾಲಜಿ ಡಿಪಾರ್ಟ್‌ಮೆಂಟ್‌ಗೆ ಅಲಾಟ್ ಮಾಡಿದ್ದಾರೆ. ಕೆಲವು ಯೂನಿಟ್‌ಗಳಲ್ಲಿ ಹಾಸಿಗೆಗಳು ಯಾವಾಗಲೂ ಖಾಲಿ ಇರುತ್ತದೆ. ಅದಕ್ಕಾಗಿ ತಾವು ಸೂಪರಿಂಟೆಂಡೆಂಟ್ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ನಿರ್ದೇಶಕರ ಸಭೆಯನ್ನು ಕರೆದು ಎಲ್ಲಿ ಹಾಸಿಗೆಗಳು ಖಾಲಿ ಇರುತ್ತದೆ ಅದನ್ನು ರೀ-ಅಲೊಕೇಟ್ ಮಾಡಿದರೆ ತತ್‌ಕ್ಷಣ ಐವತ್ತು ಅರವತ್ತು ಹಾಸಿಗೆಗಳು ಸಿಗುತ್ತದೆ. ಇದು ತಾತ್ಕಾಲಿಕವಾದ ಸಲಹೆಯಾಗುತ್ತದೆ. ಇದನ್ನು ಮಾಡಲು ಸಾಧ್ಯವೇ?

ಶ್ರೀಮತಿ ನಫಿಸಾ ಫಜಲ್: ಮಾನ್ಯ ಸಿಂಧ್ಯರವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ಒಂದೇ ಹಾಸಿಗೆಯಲ್ಲಿ ಇಬ್ಬರು ವ್ಯಕ್ತಿಗಳನ್ನು ಹಾಕಿದ್ದರು ಎಂದು ಮಾನ್ಯ ಸುರೇಶ್‌ಕುಮಾರ್‌ರವರು ಹೇಳಿದರು. ಕಳೆದ ವಾರ ಇದೇ ರೀತಿ ಮಾಡಿದ್ದ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಆಗ ನಾನು ಇದರ ಬಗ್ಗೆ ವಿಚಾರ ಮಾಡಿದಾಗ ಪದೇ ಪದೇ ಈ ರೀತಿ ನಡೆಯುತ್ತಿದೆ ಎಂಬ ವಿಚಾರ ನನಗೆ ತಿಳಿದು ಬಂತು. ಆ ರೀತಿ ಒಂದು ಹಾಸಿಗೆಗೆ ಇಬ್ಬರನ್ನು ಹಾಕುವುದು ಸರಿಯಲ್ಲ ಆ ರೀತಿ ಮಾಡಬೇಡಿ ಎಂದು ಈಗಾಗಲೇ ನಾನು ಆದೇಶ ಕೊಟ್ಟಿದ್ದೇನೆ.

(ಆ) ಗುಂಡ್ಲುಪೇಟೆಯಲ್ಲಿ ಗಣಪತಿಯ ಪ್ರತಿಷ್ಠಾಪನೆ

+ ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಗುಂಡ್ಲುಪೇಟೆ): ಮಾನ್ಯ ಅಧ್ಯಕ್ಷರೆ, ಗುಂಡ್ಲುಪೇಟೆ ಪುರಸಭೆಗೆ ಸೇರಿರುವ ಮೂರನೇ ವಿಭಾಗದ ಒಂದು ನಿವೇಶನದಲ್ಲಿ ಇದ್ದಕ್ಕಿದ್ದಂತೆ ಮಧ್ಯರಾತ್ರಿಯಲ್ಲಿ ಗಣಪತಿಯ ವಿಗ್ರಹವನ್ನು ಕೂರಿಸಿ ಆ ನಿವೇಶನವನ್ನು ಅನಧಿಕೃತವಾಗಿ ಆಕ್ರಮಿಸಿಕೊಳ್ಳಲು ಪ್ರಯತ್ನ ಮಾಡಿದ್ದಾರೆ. ಇದರ ಬಗ್ಗೆ ಪುರಸಭೆಯವರು ಜಿಲ್ಲಾಧಿಕಾರಿಯವರಿಗೆ ಮತ್ತು ಪೋಲೀಸ್ ಇಲಾಖೆಯವರಿಗೆ ದೂರು ಕೊಟ್ಟಿದ್ದರೂ ಸಹ ಕಳೆದ ಎರಡು ತಿಂಗಳಿನಿಂದ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಗುಂಡ್ಲುಪೇಟೆ ಪುರಸಭೆಯ ಆಸ್ತಿಯನ್ನು ರಕ್ಷಿಸಿ ಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ (ನಗರಾಭಿವೃದ್ಧಿ ರಾಜ್ಯ ಸಚಿವರು): ೧. ದಿನಾಂಕ: ೧೪-೧-೨೦೦೦ರ ಮಧ್ಯ ರಾತ್ರಿಯಲ್ಲಿ ಪುರಸಭೆಗೆ ಸೇರಿದ ೩ನೇ ವಿಭಾಗದ ಅನುಮ: ೫೮೦ಎ-೫೦೪ರ ಆಳತೆ ೧೩.೭೫ ೧೫.೭೫ ಮೀಟರ್ ನಿವೇಶನದಲ್ಲಿ ಅನಧಿಕೃತವಾಗಿ ಸಾರ್ವಜನಿಕರು ಗಣಪತಿಯನ್ನು ಪ್ರತಿಷ್ಠಾಪನೆ ಮಾಡಿರುತ್ತಾರೆ.